ಶ್ರೀ ಕೆ. ಎಚ್. ಪಾಟೀಲ್ :—ಜಾಗ್ರತೆ ನಾಗಿನಲಿಲ್ಲವೆಂಬುದನ್ನು ಒಪ್ಪಿದೆ ಆದರೆ ಎಕೆ ಬೇಗ ನಾಗಿನಲಿಲ್ಲವೆಂದರೆ 4 ನಲ ಟೆಂಡರು ಕರೆದರೂ ಯಾರೂ ಮುಂದೆ ಬರಲಿಲ್ಲ. ತ್ವರಿತವಾಗಿ ಕೆಲನಮೂಡಿದರೆ ಅಕ್ರಮವಾಯಿತೆಂದು ಹೇಳ ಬಹುದು. ಟೆಂಡರುದಾರರು ಯಾರೂ ಬಾರದೆ ಇದ್ದುದರಿಂದ ಇಲಾಖೆಯ ವಾಹನಗಳಿಂದ ನಾಗಿನಲು ತಡವಾಗಿದೆ.

SUPPLY OF FIREWOOD AN) COAL TO M. I. S. L

126. SRI KAGODU THIMMAPPA Sagar).—

Will the Minister for Agriculture and Forests be pleased to State :—

(*a*) the quantum of firewood and coal obtained by Iron and Steel Factory, Bhadravathi from the forest department;

(*b*) the extent of forest area being cut every year for obtaining the said firewood and coal;

(*c*) whether it has come to the notice of the Government that the forest area is being destroyed for supplying the firewood and coal mentioned above, if so action taken to prevent it ?

SRI K. H. PATIL (Minister for Agriculture and Forests). —

(*a*) On an average 7 lakhs bags of charcoal and 10,000 tons of firewood.

(*b*) About 7,000 acres

(*c*) No damages done. Clearance is taken up only in the submersion area under the Sharavathi Valley Hydro-Electric Project and in the areas taken up by the department for raising its plantations.

ಶ್ರೀ ಕಾಗೋಡು ತಿಮ್ಮಪ್ಪ.—ಸುಮಾರು 7 ಲಕ್ಷ ಮೂಟೆ ಇದ್ದಿಲು ಮತ್ತು 10 ಸಾವಿರ ಟನ್ನು ಸೌದೆ ಭದ್ರಾವತಿ ಕಾರ್ಖಾನೆಗೆ ಪ್ರತಿ ವರ್ಷ ಒದಗಿಸುವುದರಿಂದ ಇಲಾಖೆಗೆ ಎಷ್ಟು ಆದಾಯ ಬರುವುದು ?

ಶ್ರೀ ಕೆ. ಹೆಚ್. ಪಾಟೀಲ್.—ಆ ಅಂಕಿಅಂಶ ನನ್ನಲ್ಲಿಲ್ಲ, ತರಿಸುತ್ತೇನೆ

ಶ್ರೀ ಕಾಗೋಡು ತಿಮ್ಮಪ್ಪ.—ಪ್ರತಿ ವರ್ಷ 7 ಸಾವಿರ ಎಕರೆ ಪ್ರದೇಶದ ಅರಣ್ಯ ಕಡಿದರೆ ಸುಮಾರು 30 ವರ್ಷಗಳಲ್ಲಿ ಮಲೆನಾಡು ಪ್ರದೇಶದ ಅರಣ್ಯವೆಲ್ಲಾ ನಷ್ಟವಾಗುವುದು. ಆದ್ದರಿಂದ ಈ ಕಾರ್ಖಾನೆಗೆ ಬೇಕಾದ ಸೌದೆ ಮತ್ತು ಇದ್ದಿಲಿಗಾಗಿ ಪ್ರತ್ಯೇಕ ಪ್ರದೇಶವನ್ನು ರಿಸರ್ವ್ ಇಡುವಿರಾ ?

ಶ್ರೀ ಕೆ.. ಹೆಚ್. ಪಾಟೀಲ್.—ಒಂದು ಕಡೆ ಕಡಿದರೆ ಇನ್ನೊಂದು ಕಡೆ ಬೆಳಸಲಾಗುವುದು. ಇದರ ಬಗ್ಗೆ ಈಗಾಗಲೇ ಇಂಡಸ್ಟ್ರಿಯಲ್ ಇಲಾಖೆ ಮಂತ್ರಿಗಳೊಡನೆ ಮಾತನಾಡಿ ಇತರ ಮಾರ್ಗಗಳಿಂದ ಈ ಕಾರ್ಖಾನೆಯಲ್ಲಿ ಸೌದೆ ಉಪಯೋಗ ಕಡಿಮೆ ಮಾಡಲು ಸಾಧ್ಯವೇ ಎಂದು ಪರಿಶೀಲಿಸಲಾಗುತ್ತಿದೆ. ಕೈಗಾರಿಕಾ ಸಚಿವರು ಈ ವಿಚಾರವನ್ನು ಪರಿಶೀಲಿಸುವರೆಂದು ನಾನು ಭಾವಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಭದ್ರಾವತಿ ಕಾರ್ಖಾನೆಯವರಿಗೆ 30 ಸಾವಿರ ಎಕರೆ ಪ್ರದೇಶ ಕೊಟ್ಟು ಆ ಕಾರ್ಖಾನೆಯವರೇ ಆ ಪ್ರದೇಶದಲ್ಲಿ ಸೌದೆಗೆ ಮತ್ತು ಇದ್ದಲಿಗೆ ಬೇಕಾದ ಗಿಡಗಳನ್ನು ಬೆಳೆಸಿ ಅವುಗಳ ಉಪಯೋಗ ಪಡೆಯುವಂತೆ ಏಕೆ ಮಾಡಬಾರದು ? ಅವರಲ್ಲ ಅದಕ್ಕೆ ಬೇಕಾದ ಹಣದ ಸೌಲಭ್ಯವಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಎರಡೂ ಒಂದೇ ಆಗುವುದು. ಈಗ ಸರಕಾರ ವ್ಯವಸ್ಥೆ ಮಾಡಿದೆ, ನಂತರ ಕಾರ್ಖಾನೆ ಮಾಡಿಕೊಳ್ಳಬಹುದು. ಮಾನ್ಯ ಸದಸ್ಯರು ಹೇಳಿದಂತೆ ಮಾಡಿದರೆ ಕೈ ಬದಲಾವಣೆಯಾಗುವುದು, ಅಷ್ಟೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರ ಸಲಹೆಯಂತೆ ರಿಸರ್ವ್ ಪ್ರದೇಶ ಗೊತ್ತು ಮಾಡದಿದ್ದರೆ ಅರಣ್ಯವೆಲ್ಲಾ ನಾಶವಾಗುವುದು. ಆದುದರಿಂದ 20 ಸಾವಿರ ಎಕರೆ ಸೌದೆಗಾಗಿ ಮೊಸಲಾಗಿಡುವಂತೆ ವ್ಯವಸ್ಥೆ ಮಾಡಿದರೆ ಕಾರ್ಖಾನೆಯವರು ಕಡಿದರೆ ಹೆಚ್ಚು ನಷ್ಟವಾಗುವುದಿಲ್ಲ ಆದುದರಿಂದ ಸೌದೆಯ ಉಪಯೋಗಕ್ಕಾಗಿ ಬೇರೆ ಪ್ರದೇಶ ಮೊಸಲಾಗಿಡುವುದು ಒಳ್ಳೆಯದಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ಈಗಾಗಲೆ ಭದ್ರಾವತಿಯ ಸುತ್ತುಮುತ್ತಲಿನ ಪ್ರದೇಶದಲ್ಲಿ ಉರುವಲಿಗೆ ಬೇಕಾಗದ ಮರಗಳನ್ನು ಬೆಳೆಸಲಾಗುತ್ತಿದೆ. ಆದುದರಿಂದ ಇದಕ್ಕೇ ಬೇರೆ ಪ್ರದೇಶ ಮೀಸಲಾಗಿಡಬೇಕಾಗಿಲ್ಲ.

SRI SUBHASH ASTURE.—What is the ratio between cutting and plantation? How much you are cutting and how much you are planting?

SRI K. H. PATIL.—If you take the ratio of five years, the plantation will be more than that of cutting.

ಶ್ರೀ ಕೆ. ಹೆಚ್. ಪಾಟೀಲ್.—ಎಲ್ಲಾ ಡಿವಿಜನ್ನುಗಳಲ್ಲೂ ಕೂಡ ಹೊಸದಾಗಿ ಮರಗಳನ್ನು ಬೆಳೆಸಲಾಗುತ್ತಿದೆಯೇ ?

ಶ್ರೀ ಕೆ. ಹೆಚ್. ಪಾಟೀಲ್,—ಕೆಲವು ಡಿವಿಜನ್ನುಗಳಲ್ಲಿ ಬೆಳೆಸುತ್ತಿಲ್ಲ

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಈಗ ಅರಣ್ಯ ಸಂಪತ್ತು ಕಡಿಮೆಯಾಗುತ್ತಿದೆ. ನ್ಯಾಷನಲ್ ಅವರೇಜ್ 23 ಪರ್ಸೆಂಟ್ ಇರುವಾಗ 'ನಮ್ಮ ಮೈಸೂರು ದೇಶದಲ್ಲಿ ಶೇಕಡ ಹದಿಮೂರೂವರೆ ಇದೆ. ಆದುದರಿಂದ ಕಾಡನ್ನು ಕಡಿಯುವುದನ್ನು ನಿಲ್ಲಿಸುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಬೆಂಬಲಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಇನ್ನುಮೇಲೆ ನಮಗೆ ಶರಾವತಿ ಯೋಜನೆ ಪ್ರದೇಶ ಸಿಕ್ಕುವುದಿಲ್ಲ. ಪ್ರತಿ ವರ್ಷ 7 ಸಾವಿರ ಎಕರೆ ಅರಣ್ಯ ಪ್ರದೇಶ ಕಾರ್ಖಾನೆಯ ಸಾದೆಗೆ ಬೇಕು. ಈ 7 ಸಾವಿರ ಎಕರೆ ಪ್ರದೇಶವನ್ನು ಯಾವ ತಾಲ್ಲೂಕಿನಲ್ಲಿ ಗೊತ್ತುಮಾಡಲಾಗಿದೆ ? ಇದನ್ನು ನಿಗದಿಮಾಡಿದ್ದೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ಆ ವಿವರ ಈಗ ನನ್ನಲ್ಲಿಲ್ಲ. ಆದರೆ ಆ ಉದ್ದಿಮೆಯ ಸುತ್ತಮುತ್ತಲಿನ ಪ್ರದೇಶವನ್ನು ಈಗ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ.